ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 129
ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 13-12-2021.
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಶ್ರೀ ಎಸ್.ಎಲ್.ಬೈರಪ್ಪನವರ ಪರ್ವ ಕಾದಂಬರಿ ಆಧಾರಿತ ನಾಟಕವನ್ನು ರಾಜ್ಯದಲ್ಲಿ ಎಷ್ಟು ಕಡೆ ಪ್ರದರ್ಶನ ಮಾಡಲಾಗಿದೆ; ಮತ್ತು ಮಾಡಲು ಉದ್ದೇಶಿಸಲಾಗಿದೆ; (ವಿವರಗಳ ಜೊತೆಗೆ ಸದರಿ ನಾಟಕ ಪ್ರದರ್ಶನದ ನಿರ್ದೇಶಕರ/ ನಿರ್ಮಾಣದ ವಿವರ ನೀಡುವುದು)	• ಶ್ರೀ ಎಸ್.ಎಲ್.ಭೈರಪ್ಪನವರ 'ಪರ್ವ' ಕಾದಂಬರಿ ಆಧಾರಿತ ನಾಟಕವನ್ನು ರಾಜ್ಯದಲ್ಲಿ 21 ಕಡೆ ಪ್ರದರ್ಶನ ಮಾಡಲಾಗಿದೆ. (ಅನುಬಂಧ) • **ನಿರ್ಮಾಣ**:ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ರಂಗಾಯಣದ ನಿರ್ದೇಶಕರು ಶ್ರೀ ಅಡ್ಡಂಡ ಸಿ.ಕಾರ್ಯಪ್ಪ. • **ನಿರ್ದೇಶನ**: ಶ್ರೀ ಪ್ರಕಾಶ್ ಬೆಳವಾಡಿ, ಬೆಂಗಳೂರು. • ರಾಜ್ಯದ ರಂಗಮಂದಿರಗಳು ಇರುವ ಜಿಲ್ಲೆಗಳಲ್ಲಿ ಒಟ್ಟು 20 ಪ್ರದರ್ಶನ ಹಾಗೂ ರಾಷ್ಟ್ರದ ದೆಹಲಿ, ವಾರಣಾಸಿ, ಭೂಪಾಲ್, ಮುಂಬೈ ಮತ್ತು ಮಣಿಪುರ ಈ ಐದು ರಾಜ್ಯಗಳಲ್ಲಿ ತಲಾ 1 ಪ್ರದರ್ಶನದಂತೆ ಒಟ್ಟು 5 ಪ್ರದರ್ಶನ ಏರ್ಪಡಿಸಲು ಉದ್ದೇಶಿಸಲಾಗಿದೆ.
(ಆ)	ಪರ್ವ ಕಾದಂಬರಿ ಆಧಾರಿತ ಪುಸ್ತಕದಲ್ಲಿ ಪ್ರಸ್ತಾಪಿಸಿರುವ ಸನಾತನ ಆಹಾರ ಪದ್ಧತಿಯನ್ನು ಸಾರ್ವಜನಿಕ ನಾಟಕ ಪ್ರದರ್ಶನದಲ್ಲಿ ಅಳವಡಿಸಿಕೊಳ್ಳಲಾಗಿದೆಯೇ: (ವಿವರ ನೀಡುವುದು)	ಕಾದಂಬರಿಯಲ್ಲಿ ರಂಗಪಠ್ಯಕ್ಕೆ ಅಗತ್ಯವಾದ ಭಾಗಗಳನ್ನು ಮಾತ್ರ ಸಂಭಾಷಣೆಯಾಗಿ ಬಳಸಿಕೊಳ್ಳಲಾಗುತ್ತದೆ. ಪ್ರಸ್ತುತ ಪರ್ವ ನಾಟಕದ ನಿರ್ದೇಶಕರು ರಂಗಪಠ್ಯವಾಗಿ ರೂಪಿಸಿದ ಸಂಭಾಷಣೆಗಳನ್ನು ಮಾತ್ರ ಪದರ್ಶನದಲ್ಲಿ ಬಳಸಿಕೊಳ್ಳಲಾಗಿದೆ.
(ಇ)	ರಾಜ್ಯದ ಇತರೆ ಖ್ಯಾತ ಸಾಹಿತಿಗಳ/ ನಾಟಕಕಾರರ ಕೃತಿಗಳನ್ನು ಸಾರ್ವಜನಿಕ ಪ್ರದರ್ಶನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆಯೇ? (ವಿವರ ನೀಡುವುದು)	• ಹೌದು. • ಈ ಹಿಂದೆಯೂ ಅನೇಕ ಲೇಖಕರ ಕಥೆ, ಕವಿತೆ, ಕಾದಂಬರಿ ಮತ್ತು ಮಹಾಕಾವ್ಯಗಳನ್ನು ರಂಗಪಠ್ಯವಾಗಿ ರೂಪಾಂತರಿಸಿ ನಾಟಕಗಳನ್ನು ಪ್ರದರ್ಶಿಸಲಾಗಿದೆ. • ಉದಾ: ಡಾ. ಶಿವರಾಂ ಕಾರಂತರ 'ಸರಸಮ್ಮನ ಸಮಾಧಿ' • ಕುವೆಂಪು ಅವರ 'ಕಿಂದರಜೋಗಿ', ಮಲೆಗಳಲ್ಲಿ ಮದುಮಗಳು' ಮತ್ತು 'ಶ್ರೀ ರಾಮಾಯಣ ದರ್ಶನಂ' • ರವೀಂದ್ರನಾಥ್ ಟಾಗೋರ್ ರವರ 'ಗೋರ' • ಯಶವಂತ ಚಿತ್ತಾಲರ 'ಶಿಕಾರಿ' • ಪೂರ್ಣಚಂದ್ರ ತೇಜಸ್ವಿ ಅವರ 'ಕೃಷ್ಣೇಗೌಡನ ಆನೆ' • ದೇವನೂರು ಮಹದೇವ ಅವರ 'ಕುಸುಮಬಾಲೆ' ಮುಂತಾದ ಅನೇಕ ಕೃತಿಗಳನ್ನು ನಾಟಕವನ್ನಾಗಿಸಿ ಪ್ರದರ್ಶಿಸಲಾಗಿದೆ. • ಪ್ರಸ್ತುತ ಮಾಸ್ತಿಯವರ 'ಮೂಕನ ಮಕ್ಕಳು' ಕಥನ ಕಾವ್ಯವನ್ನು ನಾಟಕ ಮಾಡಿ ಪ್ರದರ್ಶಿಸಲಾಗುತ್ತಿದೆ.

ಸಂಖ್ಯೆ: ಕಸಂವಾ 76 ಕವಿಸ 2021

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ

ಮೈಸೂರು ರಂಗಾಯಣ ಸಿದ್ಧಪಡಿಸಿದ 'ಪರ್ವ' ಮಹಾ ರಂಗಪ್ರಯೋಗದ ಈವರೆಗಿನ ಪ್ರದರ್ಶನದ ವಿವರಗಳು

ಕ್ರ.ಸಂ.	ದಿನಾಂಕ	ಪ್ರದರ್ಶನ ನಡೆದ ಸ್ಥಳ
1	12.03.2021	ಕಲಾಮಂದಿರ, ಮೈಸೂರು
2	13.03.2021	ಕಲಾಮಂದಿರ, ಮೈಸೂರು
3	14.03.2021	ಕಲಾಮಂದಿರ, ಮೈಸೂರು
4	25.03.2021	ಭೂಮಿಗೀತ, ರಂಗಾಯಣ, ಮೈಸೂರು.
5	26.03.2021	ಭೂಮಿಗೀತ, ರಂಗಾಯಣ, ಮೈಸೂರು.
6	27.03.2021	ಭೂಮಿಗೀತ, ರಂಗಾಯಣ, ಮೈಸೂರು.
7	28.03.2021	ಭೂಮಿಗೀತ, ರಂಗಾಯಣ, ಮೈಸೂರು.
8	03.04.2021	ಭೂಮಿಗೀತ, ರಂಗಾಯಣ, ಮೈಸೂರು.
9	04.04.2021	ಭೂಮಿಗೀತ, ರಂಗಾಯಣ, ಮೈಸೂರು.
10	04.09.2021	ಭೂಮಿಗೀತ, ರಂಗಾಯಣ, ಮೈಸೂರು.
11	05.09.2021	ಭೂಮಿಗೀತ, ರಂಗಾಯಣ, ಮೈಸೂರು.
12	11.09.2021	ಭೂಮಿಗೀತ, ರಂಗಾಯಣ, ಮೈಸೂರು.
13	12.09.2021	ಭೂಮಿಗೀತ, ರಂಗಾಯಣ, ಮೈಸೂರು.
14	25.09.2021	ಭೂಮಿಗೀತ, ರಂಗಾಯಣ, ಮೈಸೂರು.
15	02.10.2021	ಭೂಮಿಗೀತ, ರಂಗಾಯಣ, ಮೈಸೂರು.
16	03.10.2021	ಭೂಮಿಗೀತ, ರಂಗಾಯಣ, ಮೈಸೂರು.
17	09.10.2021	ಭೂಮಿಗೀತ, ರಂಗಾಯಣ, ಮೈಸೂರು.
18	10.10.2021	ಭೂಮಿಗೀತ, ರಂಗಾಯಣ, ಮೈಸೂರು.
19	23.10.2021	ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.
20	24.10.2021	ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.
21	28.11.2021	ಭೂಮಿಗೀತ, ರಂಗಾಯಣ, ಮೈಸೂರು.